ಕಥೆ, ಫೇಸ್‌ಬುಕ್‌ನ ಕೆಲವು ಗ್ರೂಪ್‌ಗಳಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿತ್ತು. ಫೇಸ್‌ಬುಕ್ ತಾನೆ ಈಗ ಓದುಗರ ಮಾನದಂಡ. ಒಂದೆರಡು ಓದುಗರು ಕಥೆಯ ಕೊನೆಯಲ್ಲಿ ಕೊಟ್ಟ ನನ್ನ ಫೋನ್ ನಂಬರಿಗೆ ಫೋನ್ ಮಾಡಿ ಚರ್ಚಿಸಿದ್ದರು ಕೂಡ. ಆ ಲಹರಿ ನನ್ನನ್ನು ಉನ್ಮತ್ತನನ್ನಾಗಿ ಮಾಡಿತ್ತು. ಓದುಗರು ನನ್ನನ್ನು ಗುರ್ತಿಸಿದ್ದಾರೆ ಎಂಬ ಭಾವನೆ ನನ್ನಲ್ಲಿ ಏನೋ ಒಂದು ರೀತಿಯ ಮತ್ತು ಬರಿಸಿತ್ತು.

ನಾನು ಕಿಟಕಿಯಾಚೆ ನೋಡುತ್ತಾ ಮಲಗಿದೆ. ರಾತ್ರಿಯ ಹಳದಿ ದೀಪಗಳು ಬಾಳೆಯೆಲೆಗಳಲ್ಲಿ, ತೆಂಗಿನ ತೋಪುಗಳಲ್ಲಿ ಬಿದ್ದಿದ್ದವು. ಬೆಟ್ಟದ ಬುಡದ ನನ್ನ ಮನೆಯ ಕುರಿತು ನಾನು ಜ್ಞಾಪಿಸಿಕೊಂಡೆ. ಅಲ್ಲಿನ ಇರುಳಿಗೆ ನಗರದ ಹತ್ತು ಪಟ್ಟು ಕತ್ತಲೆಯಿದೆ. ಮತ್ತನ್ನೇರಿಸುವ ಕತ್ತಲೆ. ಜಗತ್ತೆ ಅಂತ್ಯಗೊಳ್ಳುವ ರೀತಿಯ ಇರುಳು. ಕೋಟೆಯೊಳಗೆ ಹಳೆಯ ರೀತಿಯಲ್ಲಿರುವ ದೊಡ್ಡ ಮನೆ. ಬಾಡಿಗೆ ಇಲ್ಲದ ಹೆಂಚಿನ ಮನೆ. ಡಿಟಿಪಿ ಸೆಂಟರಿನ ಮಾಲೀಕ ರವಿಯಣ್ಣನ ಪರಿಚಯಸ್ಥರ ಮನೆ. ಸುಲಭವಾಗಿ ಬಾಡಿಗೆಗೆ ದಕ್ಕಿತು. ಹಳೆಯ ಮನೆಯಾದ್ದರಿಂದ ಗೋಡೆ ತುಂಬ ದೇವರ ಫೋಟೊಗಳು ನೇತಾಡುತ್ತಿದ್ದವು. ಭಕ್ತಿಯ ಪಾರಮ್ಯದಲ್ಲಿ ತೇಲಾಡುತ್ತಿರುವ ಬಾಡಿಗೆ ಮನೆ. ಈ ಮಹಾನಗರಕ್ಕೆ ಬಂದು ಅನೇಕ ಜೋಡಿಗಳು ಬದುಕನ್ನು ಕಟ್ಟಿಕೊಂಡಿದ್ದಾರೆ. ಅವರ ಪೈಕಿ ಈಗ ನಾವೂ ಇದ್ದೇವೆ. ದೊಡ್ಡ ಮಟ್ಟದ ಆರ್ಥಿಕ ಅನುಕೂಲತೆ ಇಲ್ಲದವರಿಗೂ ಬದುಕಲು ಸೂಕ್ತವಾದ ನಗರ. ಚಾಲಾದ ಸಂತೆಯಲ್ಲಿ ತರಕಾರಿ, ಹಣ್ಣುಗಳು ಕಡಿಮೆ ಬೆಲೆಗೆ ಲಭ್ಯ. ಡಿಟಿಪಿ ಸೆಂಟರಿನ ಕೆಲಸ ಮತ್ತು ಪ್ರಿಯಾಳ ಫೋಥಿಸ್‌ನ ಸಂಬಳವೆಲ್ಲ ಸೇರಿದರೆ ನಮ್ಮದು ನೆಮ್ಮದಿಯ ಬದುಕು. ಅದರ ನಡುವೆ ಸಾಹಿತ್ಯಾಸಕ್ತಿಯನ್ನು ಮರೆಯುತ್ತಿರಲಿಲ್ಲ. ಬದುಕು ನಾಗಾಲೋಟದಲ್ಲಿರುವಾಗಲೇ ಬೀದಿಗಳು ಒಂದು ಪುಸ್ತಕದ ರೂಪ ತಳೆಯುತ್ತವೆ. ದಿನವೂ ಬರೆಯುತ್ತಿರುತ್ತೇನೆ. ಬದುಕಿಗಿಂತಲೂ ಮುಗಿಯದ ಕಿರುಗತೆಗಳು. ಕಂಪ್ಯೂಟರ್‌ನಲ್ಲಿ ಬಡಿಯುವ ಬೆರಳುಗಳಿಂದ, ಫೋಥೀಸ್‌ನಲ್ಲಿ ನಿಲ್ಲುವ ಪ್ರಿಯಾಳ ಕಾಲುಗಳಿಂದ ಜೀವನ ಸಾಗುತ್ತಿದೆ.

ಕೆಳಗಿನ ಬೆಡ್ಡಿನಲ್ಲಿ ಮಲಗಿರುವ ಪ್ರಿಯಾಳ ಬೆರಳುಗಳು ನನ್ನನ್ನು ಮುಟ್ಟಿ ಕರೆಯಿತು.

'ಮಗಳು ಮಲಗಿದಳು'

'ಸರಿ, ನೀನು ಮೇಲೆ ಬಾ' ನಾನು ಧ್ವನಿ ತಗ್ಗಿಸಿ ನುಡಿದೆ. ಅವಳು ಬಂದು ನನ್ನ ಬಳಿ ಮಲಗಿದಳು. ಬೆಳದಿಂಗಳ ಬೆಳಕಿನಲ್ಲಿ ಚಂದ್ರಿಕಾ ಸೋಪಿನ ನಸುಗಂಪು ಮೊದಲ ಪುಸ್ತಕವೆಂಬಂತೆ ನಾನು ಪ್ರಿಯಾಳನ್ನು ಬಳಸಿದೆ. ಪುಟಗಳನ್ನು ತೆರೆದು ಓದಿದೆ.

'ಇವತ್ತು ಸಿಗರೇಟು ಸೇದಿದಿರಿ ಅಲ್ವಾ?'

'ಅದು... ಅದು ಮತ್ತೆ ಕೀಬೋರ್ಡ್ ಬಡಿದೂ ಬಡಿದು ಆಯಾಸವಾಗಿತ್ತು. ಅದಕ್ಕೆ ಹಾಗೆ ಸುಮ್ಮನೆ ಒಂದು ರಿಲಾಕ್ಸೇಷನ್...'

'ನಾನು ಏನೂ ಮಾತನಾಡಲ್ಲ'

ಅವಳು ಜಗಳಕ್ಕೆ ಸಜ್ಜಾಗುವಂತೆ ತೋರಿತು. ಅವಳ ಎದೆಯಲ್ಲಿ ನಾನು ಮುಖ ಹುದುಗಿಸಿ ಮಲಗಿದೆ.

'ಶೋರೂಮಿನ ಎಚ್‌ಆರ್‌ಗೆ ತಿಳಿಯದಂತೆ, ನಾವು ಹೆಂಗಸರೆಲ್ಲ ಸೇರಿ ಒಂದು ಚೀಟಿ ನಡೆಸ್ತಿದ್ದೀವಿ.'

'ಹೌದಾ? ಅದನ್ನು ನನಗೆ ಹೇಳಲೇ ಇಲ್ಲವಲ್ಲ...'

'ಸರ್‌ಪ್ರೈಸ್ ಆಗಿಲೀಂತ ಸುಮ್ಮನಿದ್ದೆ. ಈ ಸಲ ಅದು ನನಗೆ ಬಿದ್ದಿದೆ. ಮೂವತ್ತು ಸಾವಿರದಷ್ಟು ನನ್ನ ಕೈಗೆ ಸಿಗತ್ತೆ.'

'ಥರ್ಟಿ ಥೌಸಂಡ್?'

'ಹೌದು ಮತ್ತೆ...' ಪ್ರಿಯಾ ನನ್ನ ಮುಖವನ್ನು ತನ್ನ ಕೈಗಳಲ್ಲಿಟ್ಟು ಪ್ರೀತಿಯಿಂದ ಚುಂಬಿಸಿದಳು.

'ಅದರಿಂದ ನಮಗೊಂದು ಪುಸ್ತಕ ತರೋದು ಕಷ್ಟವಾಗಲಾರದು.'

'ಛೆ ಛೆ... ಅದು ಬೇಡಮ್ಮ. ಅದು ಬಂದರೂ ಪುಸ್ತಕ ಕೊಳ್ಳುವವರು ಯಾರೂ ಇಲ್ಲ. ನೀನು ಕಷ್ಟಪಟ್ಟು ಉಳಿಸಿದ ಹಣದಿಂದ ನನ್ನ ಪುಸ್ತಕ ಬರಬೇಕೂಂತಿಲ್ಲ. ಅದನ್ನು ಸೇವ್ ಮಾಡೋಣ. ಮಗಳಿಗೆ ಒಂದು ಒಳ್ಳೆಯ ಸೈಕಲ್ ಕೊಡಿಸೋಣ. ಏನಂತಿಯಾ?'

ನನ್ನ ಮಾತಿಗೆ ಅವಳು ನಕ್ಕಳು. ಅವಳ ನಗುವಿಗೆ ಅಲೌಕಿಕವಾದ ಸೌಂದರ್ಯವಿದೆಯೆಂದನಿಸಿತು.

'ಅವೆಲ್ಲ ಬೇಡ... ಪುಸ್ತಕ ತರ್ಲಿಕೇಂತಲೇ ನಾನು ಚೀಟಿ ಕಟ್ತಾ ಇದ್ದಿದ್ದು...'

ಪ್ರಿಯಾ ಹಿಂದೆ ಸರಿಯುವಂತೆ ಕಾಣಲಿಲ್ಲ. ನಾನೂ ಸುಮ್ಮನಾದೆ. ಅನಂತರ ಪುಸ್ತಕದ ಕೆಲಸಗಳು ತೀವ್ರ ಗತಿಯಲ್ಲಿ ಮುಂದುವರಿದವು. ಆ ತನಕ ಬರೆದ ಕಥೆಗಳನ್ನೆಲ್ಲ ಹೊರತೆಗೆದು ಡಿಟಿಪಿ ಸೆಂಟರಿನ